


■ ಕಂನಾಡಿಗಾ ನಾರಾಯಣ
ಕಲೆ: ಎಚ್‌ಎಸ್‌ ಮೋನಪ್ಪ

# ಮಾಯದ ಇರುಳಿನಲ್ಲಿ ಮಾಯೆ ಕಂಡ ದಿವ್ಯಸ್ವಪ್ನ

## ಬುದ್ಧಂ
## ಶುದ್ಧೋದನ

‘ಇವನು ಮಹಾಜ್ಞಾನಿಯಾಗಿ ತನ್ನ ಅರಿವಿನ ಬೆಳಕಿನಿಂದ ಇಡೀ ಜಗತ್ತಿನ ಕತ್ತಲೆಯನ್ನು ತೊಳೆಯುತ್ತಾನೆ’ ಎಂದು ಅಸಿತ ಮಹರ್ಷಿಗಳು ಹೇಳಿದಾಗ ನನ್ನ ಮಗನ ಬಗ್ಗೆ ಎಂಥ ಅಭಿಮಾನವುಂಟಾಯಿತೆಂದರೆ ಅದನ್ನು ವರ್ಣಿಸಲಸದಳ. ನನಗೆ ವಂಶೋದ್ಧಾರಕ ಮಗ ಹುಟ್ಟಿದನೆಂಬುದಕ್ಕಿಂತ ನನ್ನ ಮಗ ಮಹಾಪುರುಷ ಆಗುತ್ತಾನೆಂಬುದೇ ನನ್ನ ಮನಸ್ಸನ್ನು ತುಂಬಿ ಬರುವಂತೆ ಮಾಡಿತ್ತು. ಎಂಥ ಸುಯೋಗದಲ್ಲಿ ಮಗ ಜನಿಸಿದನಲ್ಲ ಎಂದು ಖುಷಿಪಟ್ಟೆ. ಸಕಲರ ಇಷ್ಟಾರ್ಥಗಳನ್ನು ನೆರವೇರಿಸುವ ಸರ್ವಾರ್ಥಸಿದ್ಧನಾಗಲಿ ಎಂದೇ ಸಿದ್ಧಾರ್ಥನೆಂಬ ಹೆಸರಿಡಬೇಕೆಂದು ಅಸಿತ ಮಹರ್ಷಿಗಳೇ ಸೂಚಿಸಿದ್ದರು. ಅಲ್ಲದೆ ಮಗುವನ್ನು ಎತ್ತಿಕೊಂಡು ಬರುವಂತೆ ಹೇಳಿ, ನನ್ನ ಕೈಯಲ್ಲಿದ್ದಂತೆಯೇ ಮಗುವಿನ ಎರಡೂ ಕಾಲುಗಳನ್ನು ಹಿಡಿದು, ಅಂಗಾಲಿಗೆ ತಮ್ಮ ತಲೆಯನ್ನು ತಾಗಿಸಿ, ಒಂದು ಕ್ಷಣ ಏನನ್ನೋ ಧ್ಯಾನಿಸಿದವರು ಪ್ರಸನ್ನವದನರಾದರು. ಆನಂದಬಾಷ್ಪ ಅವರ ಕಣ್ಣಲ್ಲುದುರಿತು.

‘ಗುರುಗಳೇ, ಏಕೆ ಹೀಗೆ ಮಾಡಿದಿರಿ. ನಿಮ್ಮ ಆಶೀರ್ವಾದ ಆ ಮಗುವಿಗೆ ಮುಖ್ಯ, ಅಂಥದರಲ್ಲಿ ನಿಮ್ಮಂಥ ಮಹರ್ಷಿಗಳು...’ ಎಂದು ಮಾತು ತಡೆದೆ, ಮಗುವಿಗೇನಾದರೂ ಅಪಚಾರವಾದೀತೇನೋ ಎಂಬ ಭಯದಿಂದ. ‘ನನಗೆ ಈಗಾಗಲೇ ಕಾಲ ಮೀರಿದೆ. ಈ ಮಗು ಸಿದ್ಧಿಯನ್ನು ಸಾಧಿಸುವವರೆಗೆ ನಾನಿರುವುದಿಲ್ಲವಲ್ಲ...’ ಎಂದಂದು ಮಾರ್ಮಿಕ ನಗೆ ನಕ್ಕರು. ಜೊತೆಯಲ್ಲಿ ಬಂದಿದ್ದ ಶಿಷ್ಯನೂ ಸೋದರಳಿಯನೂ ಆಗಿದ್ದ

